


بسم اللهِ الرّحمٰن الرّحيم

# ತಹ್‌ರೀಕ್ ಜದೀದ್ – ತೊಂಬತ್ತೆರಡನೇ ವರ್ಷದ ಆರಂಭ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **07–11–2025** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ اِيَّاكَ نَعْبُدُ وَاِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಹಾಗೂ ಸೂರತುಲ್ ಬಖರದ 262ನೇ ವಚನ ಮತ್ತು ಅದರ ಅನುವಾದವನ್ನು ಓದಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಅಲ್ಲಾಹನ ಕೃಪೆಯಿಂದ, ನವೆಂಬರ್ 1ರಿಂದ ಜಮಾಅತಿನ ತಹ್ರೀಕ್ ಜದೀದಿನ ಹೊಸ ಆರ್ಥಿಕ ವರ್ಷವು ಪ್ರಾರಂಭವಾಗುತ್ತದೆ. ಈ ಹಿನ್ನೆಲೆಯಲ್ಲಿ, ತಹ್ರೀಕ್ ಜದೀದಿನ ಹೊಸ ವರ್ಷವನ್ನು ಘೋಷಿಸಲಾಗುತ್ತದೆ ಮತ್ತು ಕಳೆದ ವರ್ಷದ ಆರ್ಥಿಕ ತ್ಯಾಗಗಳ ಬಗ್ಗೆಯೂ ಪ್ರಸ್ತಾಪಿಸಲಾಗುತ್ತದೆ. ಅದೇ ರೀತಿ, ಆರ್ಥಿಕ ತ್ಯಾಗದ ಮಹತ್ವದ ಬಗ್ಗೆಯೂ ಸ್ವಲ್ಪ ವಿವರಿಸಲಾಗುತ್ತದೆ.

ತಹ್ರೀಕ್ ಜದೀದನ್ನು 1934ರಲ್ಲಿ ಹಝ್ರತ್ ಮುಸ್ಲಿಹ್ ಮೌಊದ್(ರ) ಪ್ರಾರಂಭಿಸಿದ್ದರು. ಇದಕ್ಕೆ ಕಾರಣವೇನೆಂದರೆ, ಆ ಕಾಲದಲ್ಲಿ ಜಮಾಅತಿನ ವಿರುದ್ಧ ಅಹ್‌ರಾರ್ ಎಂಬ ಸಂಘಟನೆಯು ದಂಗೆಯನ್ನು ಎಬ್ಬಿಸಿ ದೊಡ್ಡ ಗದ್ದಲವನ್ನು ಸೃಷ್ಟಿಸಿತ್ತು. ಹಝ್ರತ್ ಮಸೀಹ್ ಮೌಊದ್(ಅ)ರ ಖಬರ್ ಇರುವ ಬಹಶ್ತಿ ಮಖ್‌ಬರವನ್ನು ಅಪವಿತ್ರಗೊಳಿಸುವ ಯೋಜನೆಯನ್ನು ಕೂಡ ಅವರು ಹೊಂದಿದ್ದರು. ಸರ್ಕಾರ ಕೂಡ ವಿರೋಧಿಗಳಿಗೆ ಬೆಂಬಲ ನೀಡುತ್ತಿತ್ತು.

ಅಂತಹ ಸಮಯದಲ್ಲಿ, ಅಹ್ಮದಿಯ್ಯತ್ ಮತ್ತು ಇಸ್ಲಾಂ ಧರ್ಮದ ಸಂದೇಶವನ್ನು ಲೋಕದ ಮೂಲೆ ಮೂಲೆಗೆ ತಲುಪಿಸಲು, ಎದುರಾಳಿಗಳ ವಿರೋಧ ಮತ್ತು ಕಿರುಕುಳವನ್ನು ತಡೆಯಲಿಕ್ಕಾಗಿ ಜಮಾಅತಿನ ವ್ಯವಸ್ಥೆಯನ್ನು ಬಲಪಡಿಸಲು, ಒಂದು ಸ್ಥಳದಲ್ಲಿ ವಿರೋಧವಿದ್ದರೆ, ಇನ್ನೊಂದು ಸ್ಥಳದಲ್ಲಿ ಪ್ರಗತಿ ಕಾಣುವಂತಾಗಲು ಮತ್ತು ಜಮಾಅತ್ ವಿಸ್ತರಿಸುತ್ತಾ ಹೋಗಲಿಕ್ಕಾಗಿ ಹಝ್ರತ್ ಮುಸ್ಲಿಹ್ ಮೌಊದ್(ರ) ಜಮಾಅತಿನ ಮುಂದೆ ಆರ್ಥಿಕ ಸಹಾಯದ ಒಂದು ಯೋಜನೆಯನ್ನು ಮುಂದಿಟ್ಟರು.

ಅಲ್ಲಾಹನ ಕೃಪೆಯಿಂದ, ಇಂದು ನಾವು ಲೋಕದ ಎಲ್ಲ ದೇಶಗಳಲ್ಲಿ ಅಹ್ಮದಿಯ್ಯತ್ ಮತ್ತು ನಿಜವಾದ ಇಸ್ಲಾಂ ಧರ್ಮದ ಸಂದೇಶ ತಲುಪಿರುವುದನ್ನು ಕಾಣುತ್ತಿದ್ದೇವೆ. ನಮ್ಮ ಮುಬಲ್ಲಿಗರು ಅಲ್ಲಿ ಕೆಲಸ ಮಾಡುತ್ತಿದ್ದಾರೆ. ಲೋಕದ ವಿವಿಧ ದೇಶಗಳಲ್ಲಿ ನಾವು ಮಸೀದಿಗಳನ್ನು ನಿರ್ಮಿಸಿದ್ದೇವೆ, ನಮ್ಮ ಶಾಲೆಗಳು ಮತ್ತು ಆಸ್ಪತ್ರೆಗಳು ಕಾರ್ಯನಿರ್ವಹಿಸುತ್ತಿವೆ. ನಮ್ಮ ಮುಬಲ್ಲಿಗರು ಸೇವೆ ಸಲ್ಲಿಸುವ ಸೌಭಾಗ್ಯವನ್ನು ಪಡೆಯುತ್ತಿದ್ದಾರೆ, ಸಾಹಿತ್ಯಗಳ ಪ್ರಕಟಣೆಯಾಗುತ್ತಿವೆ. ಕೇಂದ್ರ ಸ್ಟುಡಿಯೋದ ಜೊತೆಗೆ, ಎಂ.ಟಿ.ಎ ಸ್ಟುಡಿಯೋಗಳು ಅನೇಕ ದೇಶಗಳಲ್ಲಿ ಸ್ಥಾಪನೆಯಾಗಿವೆ, ರೇಡಿಯೋ ಕೇಂದ್ರಗಳು ಸ್ಥಾಪನೆಯಾಗಿವೆ. ಈ ಎಲ್ಲ ಕೆಲಸಗಳಿಗೆ ಇತರ ಚಂದಾಗಳಿಂದಲೂ ಆರ್ಥಿಕ ನೆರವು ದೊರೆಯುತ್ತದೆ, ಆದರೆ ತಹ್ರೀಕ್ ಜದೀದ್ ಇದರಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ.

ನಾವು ಖಾದಿಯಾನಿನ ಪ್ರತಿಯೊಂದು ಇಟ್ಟಿಗೆಯನ್ನು ಒಡೆದು ಹಾಕುವೆವು ಮತ್ತು ಅಹ್ಮದಿಯ್ಯತ್ತನ್ನು ಭೂಮಿಯಿಂದ ಅಳಿಸಿಹಾಕುವೆವು ಎಂದು ಅಹ್‌ರಾರಿಗಳು ಘೋಷಿಸಿದ್ದರು. ಈ ಘೋಷಣೆಗಳಿಗೆ ನಮ್ಮ ವಿರೋಧಿಗಳು ಇಂದು ಕೂಡ ದನಿಗೂಡಿಸುತ್ತಾರೆ. ಅಲ್ಲಾಹನ ಕೃಪೆಯಿಂದ ಈ ಘೋಷಣೆಗಳಿಗೆ ಜಮಾಅತಿನ ಪ್ರತಿವರ್ಷದ ಪ್ರಗತಿಯಿಂದ ಉತ್ತರ ನೀಡಲಾಗುತ್ತಿದೆ. ಬೈಅತ್ ಮಾಡಿ ಜಮಾಅತಿನಲ್ಲಿ ಸೇರುವ ಜನರು ಇದಕ್ಕೆ ಉತ್ತರವಾಗಿದ್ದಾರೆ. ಇಂದು 220 ದೇಶಗಳಲ್ಲಿ ಹರಡಿರುವ ಜಮಾಅತಿನ ಪ್ರಗತಿ ಇದಕ್ಕೆ ಉತ್ತರವಾಗಿದೆ.

(ಹುಝೂರ್ ಹೇಳಿದರು:) ಹಝ್ರತ್ ಮಸೀಹ್ ಮೌಊದ್(ಅ)ರ ವಾದ ಸತ್ಯವಾಗಿತ್ತು ಮತ್ತು ಸತ್ಯವಾಗಿದೆ ಎಂಬುದಕ್ಕೆ ಅಲ್ಲಾಹನ ಈ ಕಾರ್ಯ ಮತ್ತು ಬೆಂಬಲವು ಪುರಾವೆಯಾಗಿದೆ. ಅಲ್ಲಾಹನ ಕೃಪೆಯಿಂದ, ಅಹ್ಮದಿಯ್ಯತ್ ಯಾವುದೇ ಮಾನವನಿಂದ ಸ್ಥಾಪಿಸಲ್ಪಟ್ಟ ಗಿಡವಲ್ಲ, ಯಾವುದೇ ಸಂಸ್ಥೆಯಿಂದ ಸ್ಥಾಪಿಸಲ್ಪಟ್ಟ ಗಿಡವಲ್ಲ, ಯಾವುದೇ ಸರ್ಕಾರದಿಂದ ಸ್ಥಾಪಿಸಲ್ಪಟ್ಟ ಗಿಡವಲ್ಲ, ಬದಲಿಗೆ ಅಲ್ಲಾಹನಿಂದ ಸ್ಥಾಪಿಸಲ್ಪಟ್ಟ ಗಿಡವಾಗಿದೆ ಎಂದು ಸಾಬೀತಾಗಿದೆ. ಅದು ಈಗ ದೊಡ್ಡ ಮರವಾಗಿ ಬೆಳೆದಿದೆ, ಅದರ ಕೊಂಬೆಗಳು ಇಡೀ ಲೋಕದಲ್ಲಿ ಹರಡಿವೆ. ಅಲ್ಲಾಹನು ಅದನ್ನು ಇನ್ನಷ್ಟು ಹರಡುತ್ತಿದ್ದಾನೆ ಮತ್ತು ಫಲದಾಯಕವನ್ನಾಗಿ ಮಾಡುತ್ತಿದ್ದಾನೆ. ಈ ಜಮಾಅತ್ ಮುಂದುವರೆಯುತ್ತಿದೆ ಮತ್ತು ಬೆಳೆಯುತ್ತಿದೆ.

(ಹುಝೂರ್ ಪಾರಾಯಣ ಮಾಡಿದ ಸೂರಃ ಅಲ್ ಬಖರದ 262ನೇ ವಚನದ ಬೆಳಕಿನಲ್ಲಿ ಹೀಗೆ ಹೇಳಿದರು:) "ನೀವು ನನ್ನ ಮಾರ್ಗದಲ್ಲಿ ಖರ್ಚು ಮಾಡಿದರೆ, ನಾನು ನಿಮಗೆ ಪ್ರತಿಫಲ ನೀಡದೇ ಇರುವುದಿಲ್ಲ ಬದಲಿಗೆ, ನಿಮ್ಮ ಈ ತ್ಯಾಗವನ್ನು ಏಳು ನೂರು ಪಟ್ಟು ಅಥವಾ ಅದಕ್ಕಿಂತಲೂ ಹೆಚ್ಚು ಮಾಡುವ ಶಕ್ತಿ ನನಗಿದೆ" ಎಂದು ಅಲ್ಲಾಹನು ವಾಗ್ದಾನ ಮಾಡಿದ್ದಾನೆ.

ಅಲ್ಲಾಹನು ಈ ನಿರ್ದೇಶನವನ್ನು ನೀಡಿ, ಮನಸ್ಸಾರೆ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಲು, ಅಲ್ಲಾಹನ ಧರ್ಮದ ಪ್ರಚಾರಕ್ಕಾಗಿ ಖರ್ಚು ಮಾಡಲು, ಈ ಯುಗದಲ್ಲಿ ಮಸೀಹ್ ಮೌಊದ್[ಅ] ಮತ್ತು ಅವರ ಜಮಾಅತಿಗೆ ವಹಿಸಲಾದ ಕೆಲಸಕ್ಕಾಗಿ ಖರ್ಚು ಮಾಡಲು ಸತ್ಯವಿಶ್ವಾಸಿಗಳ ಹೃದಯಗಳಲ್ಲಿ ಪ್ರೇರಣೆ ಉಂಟುಮಾಡಿದ್ದಾನೆ. ತ್ಯಾಗ ಮಾಡುವವರು ತಮ್ಮ ಅನುಭವಗಳನ್ನು ನನಗೆ ಬರೆಯುತ್ತಾರೆ. ಅಲ್ಲಾಹನು ಅವರಿಗೆ ಹೇಗೆ ತ್ಯಾಗ ಮಾಡುವ ಸೌಭಾಗ್ಯವನ್ನು ನೀಡಿದ್ದಾನೆ ಮತ್ತು ಅವರ ನಂಬಿಕೆಗಳನ್ನು ಹೇಗೆ ಬಲಪಡಿಸಿದ್ದಾನೆ ಎಂಬುದನ್ನು ಕೇಳಿ ಆಶ್ಚರ್ಯವಾಗುತ್ತದೆ.

(ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವ ಮಹತ್ವವನ್ನು ಎತ್ತಿ ತೋರಿಸಲು ಕೆಲವು ಜ್ಞಾನಪರ ಮತ್ತು ಐತಿಹಾಸಿಕ ಉಲ್ಲೇಖಗಳನ್ನು ಹುಝೂರ್ ವಿವರಿಸಿದರು. ಹುಝೂರ್ ಹೇಳಿದರು:) ಆರ್ಥಿಕ ತ್ಯಾಗ ಮಾಡಿದವರು ತಮ್ಮ ಆರಾಧನೆಯ ಮಟ್ಟವನ್ನು ಕೂಡಾ ಹೆಚ್ಚಿಸಬೇಕು, ಆರ್ಥಿಕ ತ್ಯಾಗ ಮಾಡಿ ನಾವು ಆರಾಧನೆಯಿಂದ ಮುಕ್ತರಾದೆವು ಎಂದು ಭಾವಿಸಬಾರದು.

(ಹುಝೂರ್ ಹೇಳಿದರು:) ಹಝ್ರತ್ ಪೈಗಂಬರ್[ಸ]ರ ಕಾಲದ ಸಹಾಬಿಯರ ಉದಾಹರಣೆಗಳು ಮತ್ತು ನಮ್ಮ ಜಮಾಅತಿನ ಹಿರಿಯರ ಮಾದರಿಗಳು ಸಹ ಇದನ್ನೇ ತೋರಿಸುತ್ತವೆ. ಅವರು ತಮ್ಮ ಸಂಪತ್ತನ್ನು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಲು ಲೆಕ್ಕ ಹಾಕುತ್ತಿರಲಿಲ್ಲ, ಬದಲಿಗೆ ಮುಕ್ತವಾಗಿ ಖರ್ಚು ಮಾಡುತ್ತಿದ್ದರು. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್[ರ] ಸಹ ಬಹಳ ಹೆಚ್ಚು ಆರ್ಥಿಕ ತ್ಯಾಗ ಮಾಡುತ್ತಿದ್ದರು. ಹಝ್ರತ್ ಮಸೀಹ್ ಮೌಊದ್[ಅ] ಒಂದೆಡೆ ಹೀಗೆ ಹೇಳಿದ್ದಾರೆ: "ನಾನು ಅನುಮತಿ ನೀಡಿದರೆ, ಅವರು (ಮೌಲಾನಾ ನೂರುದ್ದೀನ್, ಖಲೀಫತುಲ್ ಮಸೀಹ್ ಅವ್ವಲ್) ಎಲ್ಲವನ್ನೂ ಈ ಮಾರ್ಗದಲ್ಲಿ ತ್ಯಾಗ ಮಾಡಿ, ತಮ್ಮ ಆಧ್ಯಾತ್ಮಿಕ ಸಂಬಂಧದಂತೆ ದೈಹಿಕ ಸಂಬಂಧ ಮತ್ತು ಯಾವಾಗಲೂ ಜೊತೆಯಲ್ಲಿ ಇರುವ ಹಕ್ಕನ್ನು ಪೂರೈಸುತ್ತಿದ್ದರು."

(ತಹ್ರೀಕ್ ಜದೀದಿನ ಆರ್ಥಿಕ ಜಿಹಾದಿನಲ್ಲಿ ಲೋಕದ ಪ್ರಾಮಾಣಿಕ ಸದಸ್ಯರು ಮಾಡಿದ ತ್ಯಾಗಗಳ ಹಿನ್ನೆಲೆಯಲ್ಲಿ ಅಲ್ಬೇನಿಯಾ, ಇಂಡೋನೇಷ್ಯಾ, ಘಾನಾ, ಗಿನಿಕನಾಕರಿ, ಮಾಲಿ ಮುಂತಾದ ದೇಶಗಳ ನಿಷ್ಠಾವಂತ ಅಹ್ಮದಿಯರ ತ್ಯಾಗದ ವಿಶ್ವಾಸವರ್ಧಕ ಘಟನೆಗಳು ಮತ್ತು ಅವರಿಗೆ ಲಭಿಸಿದ ದೈವಿಕ ಪ್ರತಿಫಲಗಳು ಮತ್ತು ಅನುಗ್ರಹಗಳ ಬಗ್ಗೆ ಹುಝೂರ್ ವಿವರಿಸಿದರು.)

(ಹುಝೂರ್ ಹೇಳಿದರು:) ಭಾರತದ ತಹ್ರೀಕ್ ಜದೀದಿನ ಇನ್ಸ್‌ಪೆಕ್ಟರ್ ಹೈದರಾಬಾದಿನ ಒಬ್ಬ ವ್ಯಕ್ತಿಯ ಬಗ್ಗೆ ಬರೆಯುತ್ತಾರೆ, ಅವರ ವಾಗ್ದಾನ ಏಳು ಸಾವಿರ ರೂಪಾಯಿಗಳಾಗಿತ್ತು, ಆದರೆ ಕೆಲಸ ಕಳೆದುಕೊಂಡ ಕಾರಣದಿಂದ ಅದನ್ನು ಪಾವತಿಸಲು ಅವರಿಗೆ ಸಾಧ್ಯವಾಗಲಿಲ್ಲ. ಮುಂದಿನ ವರ್ಷಕ್ಕಾಗಿ ಅವರು ಹತ್ತು ಸಾವಿರದ ವಾಗ್ದಾನವನ್ನು ಬರೆಸಿದರು. "ಕಳೆದ ವರ್ಷದ ವಾಗ್ದಾನವನ್ನು ಕೂಡ ನೀವು ಪೂರೈಸಲಿಲ್ಲ, ಮುಂದಿನ ವರ್ಷಕ್ಕೆ ಏಕೆ ಹೆಚ್ಚಿಸಿ ವಾಗ್ದಾನ ಮಾಡುತ್ತಿದ್ದೀರಿ?" ಎಂದು ಅವರೊಡನೆ ಕೇಳಲಾಯಿತು. ಅದಕ್ಕೆ ಅವರು ಹೀಗೆ ಉತ್ತರಿಸಿದರು: "ಅಲ್ಲಾಹನೇ ಅದರ ವ್ಯವಸ್ಥೆ ಮಾಡುವನು ಎಂದು ನನಗೆ ಭರವಸೆ ಇದೆ. ಏಕೆಂದರೆ ನಾನು ಇದನ್ನು ಅಲ್ಲಾಹನಿಗಾಗಿ ನೀಡುತ್ತಿದ್ದೇನೆ." ಅದರಂತೆ, ಕೆಲವೇ ದಿನಗಳಲ್ಲಿ ಅವರಿಗೆ ಹಿಂದಿನದಕ್ಕಿಂತ ಉತ್ತಮವಾದ ಕೆಲಸ ಸಿಕ್ಕಿತು. ಅವರು ಕಳೆದ ಎರಡು ವರ್ಷಗಳ ಚಂದಾಗಳನ್ನು ಪಾವತಿಸಿದರು. ಹೊಸ ಆರ್ಥಿಕ ವರ್ಷದಲ್ಲಿ, ಅವರು ತಮ್ಮ ವಾಗ್ದಾನವನ್ನು ಮತ್ತೂ ಹೆಚ್ಚಿಸಿ ಮೂವತ್ತು ಸಾವಿರಕ್ಕೆ ಹೆಚ್ಚಿಸಿದರು ಮತ್ತು ಅದನ್ನು ಕೂಡ ಪಾವತಿಸಿದರು. ಹೀಗೆ ಅಲ್ಲಾಹನು ಅವರ ಸದ್ಭಾವನೆಗೆ ಪ್ರತಿಫಲ ನೀಡಿದನು.

(ಅನಂತರ, ಹುಝೂರ್ ತಹ್ರೀಕ್ ಜದೀದಿನ ತೊಂಬತ್ತೆರಡನೇ ಹೊಸ ವರ್ಷದ ಪ್ರಾರಂಭವನ್ನು ಘೋಷಿಸಿದರು. ತಹ್ರೀಕ್ ಜದೀದಿನ ತೊಂಬತ್ತೊಂದನೇ ವರ್ಷದ ಅಂಕಿಅಂಶಗಳನ್ನು ನೀಡುತ್ತಾ, ಹುಝೂರ್ ಹೇಳಿದರು:) ಅಲ್ಲಾಹನ ಕೃಪೆಯಿಂದ ಜಮಾಅತಿಗೆ 19.55 ಮಿಲಿಯನ್ ಪೌಂಡ್‌ಗಳ ತ್ಯಾಗವನ್ನು ನೀಡುವ ಸೌಭಾಗ್ಯ ದೊರೆತಿದೆ. ಅಲ್‌ಹಮ್ದುಲಿಲ್ಲಾಹ್. ಇದು ಕಳೆದ ವರ್ಷಕ್ಕಿಂತ 15 ಲಕ್ಷ 64 ಸಾವಿರ ಪೌಂಡ್‌ಗಳಿಗಿಂತ ಹೆಚ್ಚು.

ಒಟ್ಟು ವಸೂಲಿಯಲ್ಲಿ ಮೊದಲ ಹತ್ತು ಜಮಾಅತ್‌ಗಳು: ಜರ್ಮನಿ, ಯು.ಕೆ, ಅಮೇರಿಕ, ಕೆನಡ, ಭಾರತ, ಆಸ್ಟ್ರೇಲಿಯಾ, ಇಂಡೋನೇಷ್ಯಾ, ಮಿಡಲ್ ಈಸ್ಟಿನ ಜಮಾಅತ್‌ಗಳು ಮತ್ತು ಘಾನಾ.

ಗಮನಾರ್ಹ ಹೆಚ್ಚಳ ಮಾಡಿದ ಜಮಾಅತ್‌ಗಳು: ಮಾರಿಷಸ್, ಹಾಲೆಂಡ್.

ಒಟ್ಟಾರೆ ಕಾರ್ಯಕ್ಷಮತೆಯಲ್ಲಿ ಇತರ ಗಮನಾರ್ಹ ಜಮಾಅತ್‌ಗಳು: ಬೆಲ್ಜಿಯಂ, ಸ್ವೀಡನ್, ಫ್ರಾನ್ಸ್, ಹಾಲೆಂಡ್, ಕಬಾಬೀರ್, ಬಾಂಗ್ಲಾದೇಶ, ಬುರ್ಕಿನಾಫಾಸೊ, ನ್ಯೂಝಿಲ್ಯಾಂಡ್, ಸಿಯೆರಾಲಿಯೋನ್, ಬೆನಿನ್, ಮಾಲಿ, ನೈಜರ್, ಟರ್ಕಿ, ಜಾರ್ಜಿಯಾ, ಮಧ್ಯಪ್ರಾಚ್ಯದ ಜಮಾಅತ್‌ಗಳು ಮತ್ತು ಆಸ್ಟ್ರೇಲಿಯಾ. ಆಫ್ರಿಕಾದಲ್ಲಿ ಒಟ್ಟು ವಸೂಲಿಯಲ್ಲಿ ಮೊದಲ ಐದು ಜಮಾಅತ್‌ಗಳು: ಘಾನಾ, ಮಾರಿಷಸ್, ನೈಜೀರಿಯಾ, ಬುರ್ಕಿನಾಫಾಸೊ ಮತ್ತು ತಾಂಝಾನಿಯಾ.

ತಹ್ರೀಕ್ ಜದೀದಿನಲ್ಲಿ ಭಾಗವಹಿಸಿದವರ ಒಟ್ಟು ಸಂಖ್ಯೆ 17 ಲಕ್ಷದಷ್ಟಿದೆ. ಈ ವರ್ಷದ ವರದಿಗಳ ಪ್ರಕಾರ, ಆರನೇ ಖಾತೆಯಲ್ಲಿ ಸೇರಿದವರ ಸಂಖ್ಯೆ 43 ಸಾವಿರದ 588 ಆಗಿದೆ.

ಭಾರತದ ಹತ್ತು ರಾಜ್ಯಗಳು: ಕೇರಳ, ತಮಿಳುನಾಡು, ತೆಲಂಗಾಣ, ಒಡಿಶಾ, ಜಮ್ಮು ಮತ್ತು ಕಾಶ್ಮೀರ, ಕರ್ನಾಟಕ, ಪಂಜಾಬ್, ಬಂಗಾಳ, ಮಹಾರಾಷ್ಟ್ರ ಮತ್ತು ದೆಹಲಿ.

ಭಾರತದ ಜಮಾಅತ್‌ಗಳು: ಹೈದರಾಬಾದ್, ಕೊಯಂಬತ್ತೂರು, ಖಾದಿಯಾನ್, ಕ್ಯಾಲಿಕಟ್, ಮೇಲಪಾಳಯಮ್, ಮಂಜೇರಿ, ಬೆಂಗಳೂರು, ಕೇರಂಗ್, ಕೊಲ್ಕತ್ತ ಮತ್ತು ಕರುಲಾಯಿ.

(ಹುಝೂರ್ ಹೇಳಿದರು:) ಇದು ತಹ್ರೀಕ್ ಜದೀದಿನ ಮೊದಲ ಖಾತೆಯ ತೊಂಬತ್ತೆರಡನೇ ವರ್ಷವಾಗಿರುತ್ತದೆ, ಅದರ ಹಳೆಯ ಖಾತೆಗಳು ಮುಂದುವರಿಯುತ್ತಿವೆ; ಎರಡನೇ ಖಾತೆಯ ಎಂಬತ್ತೆರಡನೇ ವರ್ಷ, ಮೂರನೇ ಖಾತೆಯ ಅರವತ್ತೊಂದನೇ ವರ್ಷ, ನಾಲ್ಕನೇ ಖಾತೆಯ ನಲವತ್ತೊಂದನೇ ವರ್ಷ, ಐದನೇ ಖಾತೆಯ ಇಪ್ಪತ್ತೆರಡನೇ ವರ್ಷ ಮತ್ತು ಈಗ ಆರನೇ ಖಾತೆಯ ಮೂರನೇ ವರ್ಷ ಪ್ರಾರಂಭವಾಗುತ್ತಿದೆ. ಹೊಸದಾಗಿ ಬರುವವರನ್ನು ಆರನೇ ಖಾತೆಯಲ್ಲಿ ಎಣಿಕೆ ಮಾಡಲಾಗುವುದು.

(ಹಝ್ರತ್ ಮಸೀಹ್ ಮೌಊದ್(ಅ)ರ ಆರ್ಥಿಕ ತ್ಯಾಗಕ್ಕೆ ಸಂಬಂಧಿಸಿದ ಒಂದು ಉಲ್ಲೇಖವನ್ನು ಹೇಳಿ, ಹುಝೂರ್ ಹೀಗೆ ದುಆ ಮಾಡಿದರು:) ಅಲ್ಲಾಹನು ಈ ಆರ್ಥಿಕ ತ್ಯಾಗಗಳ ಕಾರಣದಿಂದ ನಮಗೆ ಇಸ್ಲಾಂ ಧರ್ಮದ ಸಂದೇಶವನ್ನು ತಲುಪಿಸುವ ಸೌಭಾಗ್ಯ ನೀಡುತ್ತಿದ್ದಾನೆ, ಅಲ್ಲಾಹನು ನಮ್ಮ ಪ್ರಯತ್ನಗಳಲ್ಲಿ ಅಪಾರವಾದ ಅನುಗ್ರಹ ಸುರಿಸಲಿ ಮತ್ತು ಅವುಗಳ ಅತ್ಯುತ್ತಮ ಫಲಿತಾಂಶಗಳನ್ನು ನೀಡಲಿ. ನಾವು ಆದಷ್ಟು ಬೇಗ ಲೋಕದಲ್ಲಿ ಏಕದೇವನ ಆಳ್ವಿಕೆ ಸ್ಥಾಪನೆಯಾಗುವುದನ್ನು ಮತ್ತು ಹಝ್ರತ್ ಪೈಗಂಬರ್(ಸ)ರ ಧ್ವಜವು ಹಾರಾಡುವುದನ್ನು ನೋಡುವಂತಾಗಲಿ. ಆಮೀನ್.

——————————*****——————————

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِىَ لَهٗ ، وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْىِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis*** *(atba)*

At, ***'Masjid Mubarak',*** *Islamabad, Tilford,* U.K. On 07-11-2025

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim | ***Layout****:* Basheer K.P. Manjeshwar

***Published By****:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon